ದಿಃ 2-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.
**ಪಾಟೀಸವಾಲುಃ** ಶ್ರೀ ಪಿ ಎಸ್ ಕೆ ವಕೀಲರಿಂದ ಪ್ರತಿವಾದಿ ಪರವಾಗಿ.

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಆಂಗ್ಲಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-1 ದಾಖಲೆಗೆ ಛಾಪಾಕಾಗದವನ್ನು ಪ್ರತಿವಾದಿ ತಂದಿರುತ್ತಾರೆ. ಪ್ರಾಮಿಸರಿ ನೋಟ್ ಎಂದೇ ಹೇಳಿ ಸದರಿ ಛಾಪಾಕಾಗದವನ್ನು ಖರೀದಿಸಲಾಗಿರುತ್ತದೆ. ನಿಪಿ-1 ದಾಖಲೆಯಲ್ಲಿ ಛಾಪಾಕಾಗದವನ್ನು ಯಾವಕಾರಣಕ್ಕಾಗಿ ಖರೀದಿಸಲಾಗಿದೆ ಎಂದು ಸದರಿ ದಾಖಲೆಯನ್ನು ನೋಡಿ ಹೇಳಲು ಆಗುತ್ತದೆಯೇ ಎಂದರೆ ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತೇನೆ.

ನನ್ನ ಮತ್ತು ಪ್ರತಿವಾದಿ ನಡುವೆ ಯಾವುದೇ ಜಮೀನಿನ ವ್ಯವಹಾರ ಆಗಿರುವುದಿಲ್ಲ. ನಿಪಿ-1 ದಾಖಲೆಯನ್ನು ಪ್ರಾಮಿಸರಿ ನೋಟ್ ಬರೆಯಲು ತಂದಿರುವುದಿಲ್ಲ, ಒಪ್ಪಂದ ಪತ್ರ ಬರೆಯಲು ತರಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ದಾಖಲೆ ಪ್ರಾಮಿಸರಿ ನೋಟ್ ಅಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆ ಹಣಸಂದ ರಶೀದಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆ ಪ್ರಾಮಿಸರಿ ನೋಟ್ ಆಗಿರುವುದಿಲ್ಲ ಮತ್ತು ಹಣಸಂದ ರಶೀದಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಿಪಿ-1 ದಾಖಲೆಗೆ ಛಾಪಾಕಾಗದವನ್ನು ಬ್ಯಾಂಕಿನಿಂದ ತಂದಿರುತ್ತಾರೆ. ಪ್ರಾಮಿಸರಿ ನೋಟ್‌ಗಳನು ಮುದ್ರಿಸಲಾಗುತ್ತದೆ ಎಂದರೆ ಸರಿ. ಮುದ್ರಿತ ಪ್ರಾಮಿಸರಿ ನೋಟ್ ಮೂಲಕವೇ ಪ್ರತಿವಾದಿ ಜೊತೆ ವ್ಯವಹರಿಸಬಹುದಿತ್ತು ಎಂದರೆ ನಿಪಿ-1 ರಂತೆ ದಾಖಲೆ ಮಾಡಿಕೊಂಡರೆ ಸುಭದ್ರವಾಗಿರುತ್ತದೆ ಎಂಬ ಕಾರಣಕ್ಕಾಗಿ ದಾಖಲೆ ಮಾಡಿಕೊಳ್ಳಲಾಗಿರುತ್ತದೆ ಎಂದು ನುಡಿಯುತ್ತೇನೆ.

ನಿಪಿ-1 ದಾಖಲೆಯಲ್ಲಿ ಹಣವನ್ನು ಪ್ರತಿವಾದಿ ಯಾವ ರೀತಿಯಲ್ಲಿ ಹಾಗೂ ಯಾವಾಗ ಮರುಪಾವತಿಸಬೇಕೆಂದು ಬರೆಯಲಾಗಿದೆಯೇ ಎಂದರೆ ನಾನು ಹಣವನ್ನು ಕೊಟ್ಟ ಬಗ್ಗೆ ಮಾತ್ರ ಬರೆದಿರುತ್ತದೆ ಎಂದು ನುಡಿಯುತ್ತೇನೆ. ನಿಪಿ-1 ದಾಖಲೆಯಲ್ಲಿ ನಮ್ಮ ಕುಟುಂಬದ ಆಸ್ತಿಯ ಮೇಲೆ ದಾವಾ ಮಾಡಿ ಕಾನೂನು ರೀತಿಯ ನನ್ನಿಂದ ವಸೂಲಿ ಮಾಡಿಕೊಳ್ಳಬಹುದು ಎಂದು ಬರೆಯಲಾಗಿದೆಯೇ ಎಂದರೆ ಬರೆದಿದೆ ಎಂದು ನುಡಿಯುತ್ತೇನೆ.

ನಿಪಿ-1 ದಾಖಲೆಯ ಶೀರ್ಷಿಕೆ ಏನಿರುತ್ತದೆ ಎಂದರೆ ಹಣಸಂದಾಯದ ಪ್ರಮಾಣ ಪತ್ರ ಇರುತ್ತದೆ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ಆದರೆ ಅದು ಪ್ರಾಮಿಸರಿ ನೋಟ್ ಎಂದು ಮಧ್ಯದಲ್ಲಿ ಬರೆದಿದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನ್ನಿಂದ ಯಾವುದೇ ಹಣ ಪಡೆದಿರುವುದಿಲ್ಲ ಹಾಗೂ ಯಾವುದೇ ಪ್ರೋನೋಟ್ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಪಡೆದಿರುತ್ತಾರೆ ಎಂದು ಹೇಳುವ ಹಣಕ್ಕೆ ಮಾಹೆಯಾನ ಶೇಕಡಾ 2 ರಂತೆ ಬಡ್ಡಿಯನ್ನು ನೀಡಲು ಒಪ್ಪಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯಲ್ಲಿ ಬೇರೊಬ್ಬ ವ್ಯಕ್ತಿಯ ಸಹಿಯನ್ನು ವೈಟ್ ನರ್ ಮೂಲಕ ಅಳಿಸಿ ಪ್ರತಿವಾದಿಯ ಸಹಿಯನ್ನು ನಂತರದಲ್ಲಿ ನಕಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಬೇರೆಯವರಿಂದ ಹಣ ಪಡೆದುಕೊಂಡು ಪ್ರೋನೋಟು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುಲ್ಲ. ಸಾಕ್ಷಿ ಸ್ವತಃ ಪ್ರತಿವಾದಿ ನನ್ನ ಗಂಡನಿಗೆ ಪ್ರೋನೋಟು ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನನ್ನ ಗಂಡನಿಗೆ ಬರೆದುಕೊಟ್ಟ ಪ್ರೋನೋಟ್ ಎಲ್ಲಿರುತ್ತದೆ ಎಂದರೆ ಈ ಕುರಿತು ಮತ್ತೊಂದು ದಾವೆಯನ್ನು ದಾಖಲಿಸಲಾಗಿದ್ದು, ನ್ಯಾಯಾಲಯದಲ್ಲಿರುತ್ತದೆ ಎಂದು ನುಡಿಯುತ್ತೇನೆ.

ಪ್ರತಿವಾದಿ ನನ್ನ ಗಂಡನಿಗೆ ರೂ.1 ಲಕ್ಷಕ್ಕೆ ಪ್ರೋನೋಟನ್ನು ಬರೆದುಕೊಟ್ಟಿರುತ್ತಾರೆ . ಸದರಿ ಪ್ರೋನೋಟನ್ನು ಪ್ರಸ್ತುತ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ . ನಾನು ಮತ್ತು ನನ್ನ ಗಂಡ ಲೇವಾದೇವಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ . ಸಾಕ್ಷಿ ಸ್ವತಃ ನಾನು ಪ್ರತಿವಾದಿಗೆ ಮಾತ್ರ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ . ನನ್ನ ಗಂಡ ಪ್ರತಿವಾದಿಗೆ ನೀಡಿದ ಹಣಕ್ಕೆ ಪ್ರತಿವಾದಿ ಮಾಹೆಯಾನ ಶೇಕಡಾ 2 ರಂತೆ ಬಡ್ಡಿ ನೀಡಲು ಒಪ್ಪಿರುತ್ತಾರೆ .

ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ ಹಾಗೂ ಬಟ್ಟೆಯನ್ನು ಹೊಲೆಯುವ ಕೆಲಸ ಮಾಡುತ್ತೇನೆ . ನನ್ನ ಗಂಡ ವ್ಯವಸಾಯ ಮಾಡುತ್ತಾರೆ . ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪ್ರತಿವಾದಿ ವಿರುದ್ಧ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಪ್ರತಿವಾದಿ ನನ್ನಿಂದ ಅಥವಾ ನನ್ನ ಗಂಡನಿಂದ ಯಾವುದೇ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ಯಾವುದೇ ಹಣ ಸಂದ ರಶೀದಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**